

## ಪತ್ರಿಕೆಯಲ್ಲಿ ಅರಳಿದ ಕಲೆ

ಕೊರೊನಾ ಕಾಲವು ಎಲ್ಲರಿಗೂ ಒಂದಲ್ಲ ಒಂದು ರೀತಿಯ ಪಾಠವನ್ನು ಕಲಿಸಿದೆ. ಆನ್‌ಲೈನ್ ಕ್ಲಾಸ್ ಬಗ್ಗೆ ಪರಿಚಯವೇ ಇಲ್ಲದ ಅದೆಷ್ಟೊ ಮಂದಿಗೆ ಅದರ ಪರಿಚಯ ಮಾಡಿದೆ. ಆನ್‌ಲೈನ್ ಕ್ಲಾಸ್ ಜೊತೆಗೆ ಬಿಡುವಿನ ಸಮಯದಲ್ಲಿ ಸೃಜನಶೀಲ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಲೂ ಸಹಾಯ ಮಾಡಿದೆ ಎಂದರೆ ತಪ್ಪಾಗದು.

ಚಿತ್ರದಲ್ಲಿ ಕಾಣುತ್ತಿರುವುದು ವಿಜಯಪುರ ಜಿಲ್ಲೆಯ ಬಸವನಬಾಗೇವಾಡಿ ತಾಲ್ಲೂಕಿನ ಮುತ್ತಗಿ ಗ್ರಾಮದ ಚೈತ್ರಾ ಕಮತಗಿ ಎಂಬ ಎಂಬಿಎ ವಿದ್ಯಾರ್ಥಿನಿಯ ಕೈಯಲ್ಲಿ ಅರಳಿದೆ ಸೃಜನಶೀಲ ಕಲೆ. ಕೊರೊನಾ ವೇಳೆಯಲ್ಲಿ ಬಿಕಾಂ ಓದುತ್ತಿದ್ದ ವಿದ್ಯಾರ್ಥಿನಿ, ಮನೆಯಲ್ಲಿದ್ದುಕೊಂಡೇ ಪತ್ರಿಕೆಗಳನ್ನು ಬಳಸಿಕೊಂಡು ವ್ಯಾನಿಟಿ ಬ್ಯಾಗ್, ಬೈಕ್, ವಿಭೂತಿ ಬುಟ್ಟಿ, ಪೆನ್ನು ಇಡುವ ಪೆಟ್ಟಿಗೆ, ಗುಬ್ಬಿ ಗೂಡು, ಜೋಕಾಲಿ ಸೇರಿದಂತೆ ಅನೇಕ ವಸ್ತುಗಳನ್ನು ತಯಾರಿಸಿದ್ದಾಳೆ.

–ಗುರುರಾಜ ಬಿ. ಕನ್ನೂರ, ಬಸವನಬಾಗೇವಾಡಿ

## ಅಪರೂಪದ ಮಿಡತೆ



ದೊಡ್ಡ ಗಾತ್ರದ ಈ ಮಿಡತೆ ಅಪರೂಪ ಮತ್ತು ಹೆಚ್ಚಾಗಿ ಒಂಟಿಯಾಗಿ ಕಾಣಿಸಿಕೊಳ್ಳುತ್ತದೆ. ಬೆಳೆಗಳನ್ನು ಹಾಳು ಮಾಡುವ ಮಿಡತೆಗಳು ಒಂದಿಂಚು ಉದ್ದವಿರಬಹುದಾದರೆ, ಇದು ನಾಲ್ಕಿಂಚಿನಷ್ಟು ಉದ್ದವಾಗಿದೆ. ನೀಳವಾದ ಕಾಲುಗಳನ್ನು ನೆಲಕ್ಕೂರಿ ಬಹು ದೂರಕ್ಕೆ ಜಿಗಿಯುವ ಇದು ಕೂಡ ಸಸ್ಯ ಭಕ್ಷಣೆಯಲ್ಲಿ ಮುಂದಿದೆ.

–ಪ. ರಾಮಕೃಷ್ಣ ಶಾಸ್ತ್ರಿ, ಬೆಳ್ತಂಗಡಿ



## ಮದುವೆ ಮಣಿ ಆರತಿ ಕಟ್ಟು



ಹಿಂದೆಲ್ಲಾ ಮನೆಯ ಹೆಣ್ಣುಮಕ್ಕಳು ಸೃಜನಾತ್ಮಕ ಕಾರ್ಯಗಳಲ್ಲಿ ತೊಡಗಿಕೊಳ್ಳುತ್ತಿದ್ದರು ಎನ್ನುವುದಕ್ಕೆ ಈ ಕಲಾಕೃತಿ ಸ್ಪಷ್ಟ ಉದಾಹರಣೆ. ಇದು ಆರತಿ ಕಟ್ಟು. ಮದುವೆ ಸಮಾರಂಭದಲ್ಲಿ ಮಣಿಗಳಿಂದ ತಯಾರಿಸಿದ ಈ ಆರತಿ ಕಟ್ಟನ್ನು ಬಳಸುವ ಪದ್ಧತಿ ರೂಢಿಯಲ್ಲಿ ಇತ್ತು. ಆದರೀಗ, ಈ ಪದ್ಧತಿ ಎಷ್ಟೊ ಮಂದಿಗೆ ಗೊತ್ತೇ ಇಲ್ಲ. ಸುಂದರವಾಗಿ ಮೂಡಿಬಂದಿರುವ ಈ ಆರತಿ ಕಟ್ಟಿಗೆ ಸುಮಾರು 85ಕ್ಕೂ ಅಧಿಕ ವರ್ಷ ಆಗಿರಬಹುದು. ಇದನ್ನು ನನ್ನಜ್ಜಿ ಮೊದಲು ಒಂದು ಮಣಿಕಟ್ಟಾಗಿ ಮಾಡಿದ್ದರು. ಅದು ಹಾಳಾಗಿದ್ದರಿಂದ ಅದರಲ್ಲಿದ್ದ ಮಣಿಗಳನ್ನೇ ಬಳಸಿಕೊಂಡು ನನ್ನತ್ತೆ ನಾಗವೇಣಿ ಅವರು 60 ವರ್ಷಗಳ ಹಿಂದೆ ಹೊಸ ವಿನ್ಯಾಸದೊಂದಿಗೆ ಆರತಿ ಕಟ್ಟು ರಚಿಸಿದ್ದರು. ಅದಿನ್ನೂ ಸುಸ್ಥಿತಿಯಲ್ಲಿಯೇ ಇದೆ. ನೋಡಲು ಸಣ್ಣ ಕವಡೆಯಂತೆ ಕಾಣುವ ಈ ಆರತಿ ಕಟ್ಟನ್ನು ಹೆಣೆದಿರುವ ಪರಿಯಂತೂ ಆಕರ್ಷಣೀಯವಾದದ್ದು.

–ಶಿವಪ್ರಸಾದ್ ಎಸ್., ಶಿವಮೊಗ್ಗ

## ಜಿರೇನಿಯಮ್ ಹೂವು

ಜಿರೇನಿಯಮ್ ಗಿಡ ಸಾಧಾರಣವಾಗಿ ಎಲ್ಲ ಕಾಲದಲ್ಲೂ ಹೂವು ಬಿಡುತ್ತದೆ. ಈ ಗಿಡದಲ್ಲಿ ನಾವು ಗುಲಾಬಿ, ಕೆಂಪು, ಬಿಳಿ ಹಾಗೂ ನೇರಳೆ ಬಣ್ಣದ ಹೂವು ಬಿಡುವ ಜಾತಿಯನ್ನು ನೋಡಬಹುದು. ಈ ಗಿಡದ ಮೂಲ ಸ್ಥಾನ ದಕ್ಷಿಣ ಆಫ್ರಿಕಾ ಆಗಿದ್ದು, ಭಾರತ, ಚೀನಾ, ಫ್ರಾನ್ಸ್ ಹಾಗೂ ಬೆಲ್ಜಿಯಂ ದೇಶಗಳಲ್ಲಿ ನೋಡಬಹುದು. ಇದರ ವೈಜ್ಞಾನಿಕ ಹೆಸರು ಪೆಲಗ್ರೋನಿಯಮ್. ಈ ಗಿಡವು ತನ್ನಲ್ಲಿ ಅನೇಕ ಔಷಧೀಯ ಗುಣವನ್ನು ಹೊಂದಿದ್ದು ಇದರ ತೈಲವನ್ನು ಮಂಡಿ ನೋವು, ಚರ್ಮದ ಕಾಯಿಲೆ ಹಾಗೂ ಖಿನ್ನತೆ ನಿವಾರಣೆಗೆ ಉಪಯೋಗಿಸುತ್ತಾರೆ. ಜಿರೇನಿಯಮ್ ಗಿಡದಲ್ಲಿ ಹೂವು ಅರಳಿದಾಗ ಅದರ ಸೌಂದರ್ಯ ಸವಿಯುವುದೇ ಸೌಭಾಗ್ಯ.

–ಸಂಜ್ಞಾ ಭಟ್, ಶಿರಸಿ

